**ದಿನಾಂಕ: 24-11-2022 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್ ಸಂಖ್ಯೆ 202 (ಹಳೆ ವಾರ್ಡ್ ಸಂಖ್ಯೆ 165) ಗಣೇಶ ಮಂದಿರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ. ಯತೀಶ್. ಎ. ಜೆ – ನೋಡೆಲ್ ಅಧಿಕಾರಿ ಮತ್ತು ಸ.ಕಾ.ನಿ.ಅ (ಬನಶಂಕರಿ) ಉಪವಿಭಾಗ
2. ಶ್ರೀ. ಮೋಹಿತ್. ಆರ್ – ಸಹಾಯಕ ಅಭಿಯಂತರರು (ಕಿಯೋನಿಕ್ಸ್)
3. ಶ್ರೀ. ಪವನ್ – ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀಮತಿ. ಕವಿತ – ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ. ಹರೀಶ್ – ಅರಣ್ಯಾಧಿಕಾರಿಗಳು (ದಕ್ಷಿಣ-ವಲಯ).

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 202 (ಹಳೆ ವಾರ್ಡ್ ಸಂಖ್ಯೆ 165) ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು (ಕಿಯೋನಿಕ್ಸ್) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ವಾರ್ಡ್ ವ್ಯಾಪ್ತಿಯಲ್ಲಿರುವ ಡಾ॥ ಪುನೀತ್ ರಾಜ್‌ಕುಮಾರ್ ರಸ್ತೆಯಲ್ಲಿರುವ ರಾಣಿ ಚೆನ್ನಮ್ಮ ಮೇಲ್ಸೇತುವೆಯನ್ನು ಹತ್ತುವ ಮುನ್ನ ಇರುವ ಹಂಪ್ ದುರಸ್ಥಿಯಾಗಿದ್ದು ವಾಹನ ಸವಾರರಿಗೆ ತೊಂದರೆಯಾಗಿರುತ್ತದೆ. ಆದ್ದರಿಂದ ಸದರಿ ಹಂಪ್‌ಅನ್ನು ಸರಿಪಡಿಸಿಕೊಡಲು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ಕೋರಿದ್ದರು. ಅದರಂತೆ ಸದರಿ ಹಂಪ್‌ಅನ್ನು ದುರಸ್ಥಿಗೊಳಿಸು ವಾಹನಗಳ ಸುಗಮ ಸಂಚಾರಕ್ಕೆ ದಾರಿ ಮಾಡಲಾಗಿರುತ್ತದೆ ಎಂದು ಯೋಜನೆ-ಕೇಂದ್ರ ವಿಭಾಗ ರವರು ತಿಳಿಸಿದರು.

ವಾರ್ಡ್ ವ್ಯಾಪ್ತಿಯ ಬನಶಂಕರಿ 2ನೇ ಹಂತದ 22ನೇ ಮುಖ್ಯರಸ್ತೆ, ರಾಯರ ಮಠ ರಸ್ತೆಯಲ್ಲಿ ಡೆಬ್ರಿಸ್ ಇರುತ್ತದೆ. ಅದದಿ ವಾಹನಗಳಿಗೆ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಾರ್ವಜನಿಕರು ದೂರು ನೀಡಿದ್ದರು. ಅದರಂತೆ ಸದರಿ ಡೆಬ್ರಿಸ್ ಅನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವುದು ಮಾಡಲಾಗಿರುತ್ತದೆ ಎಂದು ಸಹಾಯಕ ಅಭಿಯಂತರರು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲ ರಸ್ತೆಗಳಲ್ಲಿ ಇರುವ ಮರಗಳ ರೆಂಬೆ ಕೊಂಬೆಗಳು ಅತಿಯಾಗಿ ಬೆಳೆದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಸದರಿ ಮರಗಳ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ಅರಣ್ಯ ಇಲಾಖೆ ರವರು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಉಂಟಾಗುತ್ತಿರುವ ರಸ್ತೆಗುಂಡಿಗಳನ್ನು ಆಗಿಂದಾಗ್ಗೆ ಮುಚ್ಚಲಾಗುತ್ತಿರುತ್ತದೆ ಎಂದು ಸಹಾಯಕ ಅಭಿಯಂತರರು ತಿಳಿಸಿದರು.

ಪು.ತಿ.ನೋ

ವಾರ್ಡ್ ವ್ಯಾಪ್ತಿಯ ಉದ್ಯಾನವನಗಳ ಕೆಲವು ಪ್ರದೇಶಗಳಲ್ಲಿ ಮಳೆ ನೀರು ತುಂಬಿ ಸೊಳ್ಳೆಗಳು ಹೆಚ್ಚಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು. ಆದ್ದರಿಂದ ಸದರಿ ಉದ್ಯಾನವನಗಳಲ್ಲಿ ಸೊಳ್ಳೆಗಳು ಇರುವ ಪ್ರದೇಶಗಳಿಗೆ ಔಷಧಿ ಸಿಂಪಡಿಸಲು ಕ್ರಮವಹಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ ಅಂಡ್ ಟ್ರಾಕ್ಟರ್ ಉಪಯೋಗಿಸಿ ಚರಂಡಿಗಳಲ್ಲಿ ಹೂಳು ತೆಗೆಯುವುದು, ಡೆಬ್ರಿಸ್ ತೆಗೆಯುವುದು ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿರುತ್ತದೆ ಎಂದು ಸಹಾಯಕ ಅಭಿಯಂತರರು ತಿಳಿಸಿದರು.

ವಾರ್ಡ್ ಸಂಖ್ಯೆ 202 (ಹಳೆ ವಾರ್ಡ್ ಸಂಖ್ಯೆ 165) ರಲ್ಲಿನ ಎಲ್ಲಾ ಭಾಗಗಳಲ್ಲಿ ಘನತ್ಯಾಜ್ಯ ವಿಲೇವಾರಿ ಕಾರ್ಯ, ಸಿವಿಲ್ ಕಾಮಗಾರಿಗಳು ಹಾಗೂ ಇನ್ನಿತರೆ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿರುತ್ತದೆ ಎಂದು ಸಮಿತಿ ಸದಸ್ಯರು ಅಭಿಪ್ರಾಯಿಸಿದರು.

ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯಗಳಾದ ರಸ್ತೆಗುಂಡಿ ಮುಚ್ಚುವಿಕೆ, ಕಟ್ಟಡ ತ್ಯಾಜ್ಯ ವಿಲೇವಾರಿ, ಘನತ್ಯಾಜ್ಯ ವಿಲೇವಾರಿ, ಬೆಸ್ಕಾಂ ಸಂಬಂಧಿತ, ಜಲಮಂಡಳಿ ಸಂಬಂಧಿತ, ಆರೋಗ್ಯ ಇಲಾಖೆ ಹಾಗೂ ಇನ್ನಿತರೆ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಮರ್ಪಕ ಕಾರ್ಯನಿರ್ವಹಣೆಯ ಬಗ್ಗೆ ಆಯಾ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಾರ್ವಜನಿಕರಿಗೆ ವಿವರಿಸಿದರು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಶ್ರೀ. ಯತೀಶ್. ಎ. ಜೆ, ನೋಡೆಲ್ ಅಧಿಕಾರಿ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ 165
ಗಣೇಶ ಮಂದಿರ